

ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

**ಇತ್ತೀಚೆಗೆ ಹುಡುಗಿಯರ ಮೇಲೆ ಸಮೂಹ ಅತ್ಯಾಚಾರ ನಡೆಯುತ್ತಿರುವುದು ಎಲ್ಲ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಲೈಂಗಿಕ ಅತ್ಯಾಚಾರ ಇತ್ತೀಚೆಗೆ ಏಕೆ ಹೆಚ್ಚುತ್ತಿದೆ? ನಮ್ಮಲ್ಲಿ ನೈತಿಕ ನೆಲೆಗಟ್ಟು ಕುಸಿಯುತ್ತಿರುವುದೇ ಕಾರಣವೇ? ಇದಕ್ಕೂ ಶರೀರದ ಹಾರ್ಮೋನುಗಳಿಗೂ ಸಂಬಂಧವಿದೆಯೆ? ಸಹಜವಾದ ಸಂಭೋಗವು ಬಲಾತ್ಕಾರವಾಗಲು ಯಾವಾಗಿನಿಂದ ಶುರುವಾಯಿತು? ಇದಕ್ಕೆ ನಿಮ್ಮ ಪ್ರಕಾರ ಏನು ಶಿಕ್ಷೆ ಸೂಕ್ತವಾದೀತು? ಮರಣದಂಡನೆ ಸರಿಯೆ?**

ಸ್ತ್ರೀಯರ ಮೇಲಿನ ಅತ್ಯಾಚಾರ ಹೊಸದೇನೂ ಅಲ್ಲ. ರಾಮಾಯಣದ ಕಾಲದಿಂದಲೂ ಇದರ ಉಲ್ಲೇಖವಿದೆಯಾದರೂ ಇತ್ತೀಚೆಗೆ ಮಾಧ್ಯಮಗಳಿಂದ ಹೆಚ್ಚಾಗಿ ಬೆಳಕಿಗೆ ಬರುತ್ತಿದೆ. ಅತ್ಯಾಚಾರ ಇತ್ತೀಚೆಗೆ ಹೆಚ್ಚುತ್ತಿರುವುದು ನಿಜವೆಂದಾದರೆ ಇದಕ್ಕೆ ಅನೇಕ ಹೊಳಹುಗಳಿವೆ: 1) ಬದಲಾದ ಜೀವನಶೈಲಿ: ಉದ್ಯೋಗ ಸ್ಥಿತಿಗೆ ತಕ್ಕಂತೆ ಹೆಣ್ಣು ತಡರಾತ್ರಿ ಮನೆಗೆ ಮರಳಬಹುದು; ಅಥವಾ ತಡರಾತ್ರಿಯ ಕೂಟಗಳು ಅಸುರಕ್ಷಿತವಾಗಬಹುದು. 2) ಮಾಧ್ಯಮದ ಹಾವಳಿ: ಇಂಟರ್‌ನೆಟ್ ಹಾಗೂ ಮೊಬೈಲ್‌ನಲ್ಲಿ ದೊರಕುವ ಅಸಹಜ ಕಾಮೋತ್ತೇಜಕ ದೃಶ್ಯಗಳು ತರುಣಮನವನ್ನು ಕಲುಷಿತಗೊಳಿಸಿ, ಹೆಣ್ಣು ಭೋಗವಸ್ತುವೆಂಬ ಕಲ್ಪನೆ ಕೊಡುತ್ತವೆ. ಹೆಣ್ಣು ಒಲ್ಲೆಯೆಂದರೂ ಒಪ್ಪುತ್ತಾಳೆ ಎನ್ನುವ ಭ್ರಮೆಯನ್ನು ಉಂಟುಮಾಡುತ್ತವೆ. 3) ಸಡಿಲವಾದ ಮೌಲ್ಯಗಳು: ಸಾಂಪ್ರದಾಯಿಕ ನೆಲೆಗಟ್ಟು ಸಡಿಲಗೊಂಡ ಪರಿಣಾಮದಿಂದ ಹೆಣ್ಣಿಗೆ ಗೌರವ ಕೊಡುವುದು ಕಡಿಮೆಯಾಗುತ್ತಿದೆ. ಅದಕ್ಕೆ ಪುಟಗೊಡುವಂತೆ ಮಹಿಳೆಯರ ಉಡುಪಿನಿಂದ ಅಂಗಾಂಗಗಳ ಪ್ರದರ್ಶನ ನಡೆಯುತ್ತಿದೆ. ಇದು ಹೆಣ್ಣಿನ ವ್ಯಕ್ತಿಸ್ವಾತಂತ್ರ್ಯದ ಗುರುತೆಂದು ಹೆಮ್ಮೆಪಡುವ ಭರದಲ್ಲಿ ಅಡ್ಡಹಾದಿ ಹಿಡಿಯುವ ಸಂಭವವೂ ಇದೆ– ಜೀವಶಾಸ್ತ್ರದ ಪ್ರಕಾರ ಹೆಚ್ಚು ಪ್ರದರ್ಶನವಾಗುವ ಅಂಗಾಂಗಗಳು ಹೆಚ್ಚು ಆಕರ್ಷಣೆ ಉಂಟುಮಾಡುತ್ತವೆ! (ಸುಂದರಿಯೊಬ್ಬಳು ಯಾವ ಸಂದರ್ಭದಲ್ಲಿ ಪ್ರಚೋದಕವಾಗಿ ಕಾಣುತ್ತಾಳೆ? ಮೈತುಂಬ ಸಡಿಲ ಬಟ್ಟೆ ಹಾಕಿಕೊಂಡಾಗಲೋ/ ಬಿಗಿಯಾದ ಕನಿಷ್ಠ ಉಡುಪಿನಲ್ಲೋ ಎಂಬುದು ಊಹೆಗೂ ಬಿಟ್ಟಿದ್ದು!) 4) ಅತ್ಯಾಚಾರಿಗಳ ಮನೋಭಾವ: ಇವರಲ್ಲಿ ಹಲವರು ಮನೋವಿಕಾರಿಗಳು ಹಾಗೂ ಪ್ರಕಟಘಾತುಕರು ಇದ್ದರೂ ಎಲ್ಲರೂ ಹಾಗೆಯೇ ಎಂದೇನಲ್ಲ. ಯಾಕೆಂದರೆ ಸ್ತ್ರೀಯರನ್ನು ಕಂಡರೆ ಪುರುಷರು ಲೈಂಗಿಕವಾಗಿ ಉದ್ರೇಕಗೊಳ್ಳುವುದು ಸೃಷ್ಟಿಯ ನಿಯಮ. ಹಾಗೆಯೇ ಪುರುಷರನ್ನು ಕಂಡರೆ ಕೆಲವು ಸ್ತ್ರೀಯರು ಮುಗಿಬೀಳುವುದೂ ಇದೆ. ಅಂಥ ಪ್ರಕರಣಗಳಲ್ಲಿ ಸ್ತ್ರೀಯರಿಗೆ ಶಾರೀರಿಕವಾಗಿ ಸಾಧ್ಯವಿದ್ದರೆ ಅವರೂ ಪುರುಷರನ್ನು ಬಲಾತ್ಕರಿಸಬಹುದಿತ್ತೇನೋ? ಬಲಾತ್ಕಾರದಿಂದ/ ಬೆದರಿಸಿ ಆಸೆಯನ್ನು ತೀರಿಸಿಕೊಂಡ ಹೆಣ್ಣುಗಳು ಅಪರೂಪವೇನಲ್ಲ. ಆದರೆ ಇದು ಸಮೂಹ ಬಲಾತ್ಕಾರವಾಗುತ್ತಿಲ್ಲ ಎಂದು ಸಮರ್ಥಿಸಿಕೊಳ್ಳುವವರಿಗೆ ವಿರೋಧವಾಗಿ ದೃಷ್ಟಾಂತಗಳಿವೆ. (ವೀರ್ಯವನ್ನು ಮುಖಕ್ಕೆ ಹಚ್ಚಿಕೊಂಡರೆ ಮುಖಸೌಂದರ್ಯ ವೃದ್ಧಿಯಾಗುತ್ತದೆ ಎಂಬ (ತಪ್ಪು) ನಂಬಿಕೆಯಿಂದ ಯುವತಿಯೊಬ್ಬಳು ಇಬ್ಬರು ವೃದ್ಧರನ್ನು ಕರೆದೊಯ್ದು ತನ್ನಿಬ್ಬರು ಗೆಳತಿಯರೊಂದಿಗೆ ಲೈಂಗಿಕ ಕ್ರಿಯೆಗೆ ಬಲಾತ್ಕರಿಸಿದ್ದನ್ನು ನನ್ನೊಂದಿಗೆ ಹೇಳಿಕೊಂಡಿದ್ದಾಳೆ. ಹಾಗೆಯೇ ಒಬ್ಬ ಸುಂದರ ಯುವಕನು ನಾಲ್ವರು ಯುವತಿಯರಿಂದ ಬಲಾತ್ಕಾರಕ್ಕೆ ಒಳಗಾಗಿ ತನ್ನ ಪುರುಷತ್ವದ ಬಗೆಗೆ ತಿರಸ್ಕಾರ ಹೊಂದಿರುವುದು ನನಗೆ ಗೊತ್ತಿದೆ.) ಇದೆಲ್ಲವನ್ನೂ ನೋಡಿದರೆ ಲೈಂಗಿಕ ಪ್ರವೃತ್ತಿ ಹಾಗೂ ವರ್ತನೆಗಳು ಅತ್ಯಂತ ವ್ಯಕ್ತಿಗತವಾಗಿರುವುದನ್ನು ಎತ್ತಿತೋರಿಸುತ್ತವೆ. 5) ಪರಿಸರ: ಲೈಂಗಿಕ ಪ್ರವೃತ್ತಿಯು ಸಮಾಜಘಾತುಕ ಎನ್ನಿಸಿಕೊಳ್ಳಲು ಪರಿಸರ, ಸಂಸ್ಕಾರ ಹಾಗೂ ಬಾಲ್ಯಾನುಭವ ಬಹಳಷ್ಟು ಪ್ರಭಾವ ಬೀರುತ್ತವೆ. ಉದಾಹರಣೆಗೆ, ಕುಡುಕ ಅಪ್ಪನಿಂದ ಅಮ್ಮನ ಬಲಾತ್ಕಾರ, ತಾಯಿಯ ವಿವಾಹಬಾಹಿರ ಸಂಬಂಧದಲ್ಲಿ ಪುಟ್ಟಮಕ್ಕಳ ನಿರ್ಲಕ್ಷ್ಯ, ತಾನೇನು ಮಾಡಿದರೂ ನಡೆಯುತ್ತದೆ ಎಂಬ ಬಾಲ್ಯದ ವಾತಾವರಣ, ಮಕ್ಕಳ ತಪ್ಪುಗಳಿಗೆ ಜಾಣಗುರುಡು ತೋರಿಸಿ ಪರೋಕ್ಷವಾಗಿ ಪ್ರೋತ್ಸಾಹಿಸುವ ಹಿರಿಯರು ಇತ್ಯಾದಿ. ಇದರಿಂದ ತಾನೇ ಸರಿಯೆನ್ನುವ ಆತ್ಮವ್ಯಾಮೋಹ (ನಾರ್ಸಿಸಿಸಮ್), ಸಮಾಜಘಾತುಕ ಅಪರಾಧಿ ವ್ಯಕ್ತಿತ್ವ, ಒಲಿಯದ ಹೆಣ್ಣಿನ ಅಹಂಕಾರಕ್ಕೆ ಬಲಪ್ರಯೋಗದಿಂದ ಪಾಠ ಕಲಿಸುವ ಅಹಂಭಾವ ಇತ್ಯಾದಿ ನ್ಯೂನತೆಗಳು ಹುಟ್ಟಿಕೊಳ್ಳುತ್ತವೆ. ಸ್ನೇಹಸಮೂಹದೊಡನೆ ಗುರುತಿಸಿಕೊಳ್ಳಲು ಕೆಲವರು ಈ ಕುಕೃತ್ಯದಲ್ಲಿ ಪಾಲುಗೊಳ್ಳುತ್ತಾರೆ. ಲೈಂಗಿಕ ಅತ್ಯಾಚಾರಕ್ಕೆ ಸಿಝೊಫ್ರೆನಿಯ ಮುಂತಾದ ಮನೋರೋಗಗಳು ಹಿನ್ನೆಲೆಯಲ್ಲಿದ್ದರೂ ಇಂಥವರು ಸಮೂಹ ಕೃತ್ಯದಲ್ಲಿ ಪಾಲುಗೊಳ್ಳುವುದು ವಿರಳ. 6) ಎಲ್ಲ ಕಾರಣಗಳಿಗೂ ಕಳಸಪ್ರಾಯ ಮದ್ಯಪಾನ. ಅದು ವ್ಯಕ್ತಿಗತ ಸಂಸ್ಕಾರವನ್ನು ತೆಗೆದುಹಾಕಿ ಒಳಗಿನ ಮೃಗತ್ವವನ್ನು ಬಹಿರಂಗಗೊಳಿಸುತ್ತದೆ. 7) ವೈದ್ಯಕೀಯ ದೃಷ್ಟಿಕೋನದಿಂದ ವೀಕ್ಷಿಸಿದರೆ ಅತ್ಯಾಚಾರಿಗಳಲ್ಲಿ ಟೆಸ್ಟೋಸ್ಟೆರೋನ್ ಎಂಬ ಹಾರ್ಮೋನ್‌ನ ಮಟ್ಟ ಹೆಚ್ಚಿಗಿರುವುದು ಬಹುತೇಕರಲ್ಲಿ ಕಂಡುಬಂದಿದೆ. 8) ಬಲಾತ್ಕಾರದ ನಂತರ ಅವರ ಮನಸ್ಸು ಹೇಗಿರುತ್ತದೆ ಎಂಬುದು ಕುತೂಹಲಕರ. ಪಶ್ಚಾತ್ತಾಪದಿಂದ ಹಿಡಿದು ವಿಜೃಂಭಣೆಯ ತನಕ ವಿವಿಧ ವರ್ತನೆಗಳು ಇವರಲ್ಲಿ ಕಂಡುಬಂದಿವೆ. ಆದರೆ ಪಶ್ಚಾತ್ತಾಪಪಟ್ಟು ಸ್ವತಃ ಕಾನೂನಿನ ಕೈಗೊಪ್ಪಿಸಿಕೊಂಡಿರುವುದು ಇಲ್ಲ; ಇದಕ್ಕೆ ಶಿಕ್ಷೆ ಬೇಕು. 9) ಅತ್ಯಾಚಾರಕ್ಕೆ ಮರಣ ದಂಡನೆಯೇ ಸರಿಯಾದ ಮಾರ್ಗ ಎನ್ನುವುದು ಕೆಲವರ ವಾದ. ಇದನ್ನು ಉತ್ತರಿಸಲು ನಾನು ಅರ್ಹ ವ್ಯಕ್ತಿಯಲ್ಲ. ಆದರೂ: ಶಿಕ್ಷೆಯನ್ನು ನೋಡಿ ಜನ ಪಾಠ ಕಲಿಯುತ್ತಾರೆಯೆ? ಶಿಷ್ಟಪಾಠ ಒತ್ತಟ್ಟಿಗಿರಲಿ, ಸಿಕ್ಕಿಹಾಕಿಕೊಳ್ಳದಂತೆ ಉಪಾಯಗಳನ್ನು ಅಪರಾಧಿಗಳು ಯೋಜಿಸುತ್ತಲೇ ಇದ್ದಾರೆ! ಅದಲ್ಲದೆ ಸಾರ್ವಜನಿಕರ ನೆನಪು ಅಲ್ಪಕಾಲ. ಆದ್ದರಿಂದ ಜನರ ಕಣ್ಣಿಗೆ ರಾಚುವಂತೆ ದೀರ್ಘ ಪರಿಣಾಮದ ಶಿಕ್ಷೆ, ಹಾಗೂ ಅದರ ಬಗೆಗೆ ನಿರಂತರ ಜನಜಾಗೃತಿಯನ್ನು ಉಂಟುಮಾಡುವ ಕಾನೂನು ಅಗತ್ಯವಿದೆ. ಗಮನಿಸಬೇಕಾದ ಅಂಶವೆಂದರೆ, ಅತ್ಯಾಚಾರಕ್ಕೂ ಕೊಲೆಯಂಥ ಇತರ ಘೋರ ಅಪರಾಧಗಳಿಗೂ ವ್ಯತ್ಯಾಸವಿದೆ. ಅತ್ಯಾಚಾರದ ಮೂಲದಲ್ಲಿ ಹೆಣ್ಣುಗಂಡು ಸೇರಿ ಸುಖಪಡುವ ಸಹಜಕ್ರಿಯೆಯಿದೆ; ಆದರೆ ಕೊಲೆಯನ್ನು ಎಳ್ಳಷ್ಟೂ ಸಹಜವೆನ್ನುವಂತಿಲ್ಲ! ಶಿಕ್ಷೆಯು ಅಪರಾಧಕ್ಕೇ ವಿನಾ ಅಪರಾಧಿಗಲ್ಲ ಎನ್ನುವುದು ಇಲ್ಲಿ ಬಹಳ ಪ್ರಸ್ತುತವಾಗುತ್ತದೆ. ಹೀಗಾಗಿ ಕಾಮಕ್ರಿಯೆಯ ಹೆಸರಿನಲ್ಲಿ ನಡೆಯುವ ದೌರ್ಜನ್ಯಕ್ಕೆ ತಡೆಹಾಕುವುದು ಮುಖ್ಯ. ಇದರ ಸೂಕ್ತಾಸೂಕ್ತತೆಗಳನ್ನು ನಿರ್ಧರಿಸುವುದನ್ನು ನಮ್ಮ ಕಾನೂನಿನ ವ್ಯವಸ್ಥೆಗೆ ಬಿಡುವುದು ಒಳ್ಳೆಯದು. ಆದರೆ ಶರೀರ– ಮನೋಲೈಂಗಿಕ ದೃಷ್ಟಿಯಿಂದ ಹೇಳುವುದಾದರೆ ಲೈಂಗಿಕ ಅಪರಾಧಿಗಳಿಗೆ ಕಾಮಹರಣವು ಒಂದು ಸೂಕ್ತ ಶಿಕ್ಷೆ ಎಂದು ನನ್ನ ಅಭಿಪ್ರಾಯ. ಇದು ಹೀಗೆ: ಪುರುಷತ್ವದ ಹಾರ್ಮೋನ್ ಟೆಸ್ಟೋಸ್ಟೆರೋನ್‌ಗೆ ವಿರುದ್ಧವಾಗಿ ಕೆಲವು ಔಷಧಿಗಳಿವೆ. ಇವುಗಳನ್ನು ಸೇವಿಸುತ್ತಿದ್ದಲ್ಲಿ ಕಾಮದ ಹಪಹಪಿ ಉಂಟಾಗುವುದಿಲ್ಲ. ಇದರ ದೋಷವೆಂದರೆ ಔಷಧಿಯನ್ನು ನಿಲ್ಲಿಸಿದಾಗ ಯಥಾಸ್ಥಿತಿಗೆ ಮರಳುವ ಸಾಧ್ಯತೆಯಿದೆ. ಕಾಮಹರಣವನ್ನು ಶಾಶ್ವತವಾಗಿ ಮಾಡಲು ನನ್ನ ಅಭಿಪ್ರಾಯದಲ್ಲಿ ಅತ್ಯುತ್ತಮ ಉಪಾಯವೆಂದರೆ ಶಸ್ತ್ರಚಿಕಿತ್ಸೆ. ಇಲ್ಲಿ ವೃಷಣಬೀಜಕ್ಕೆ ಪೂರೈಕೆ ಮಾಡುವ ರಕ್ತನಾಳಗಳನ್ನು ಕತ್ತರಿಸಿದರೆ ಆಯಿತು, ಕೆಲವೇ ದಿನಗಳಲ್ಲಿ ಬೀಜಗಳು ನಶಿಸಿಹೋಗುತ್ತವೆ. ಇದರಿಂದ ವ್ಯಕ್ತಿಯ ಹಸಿ ಕಾಮಾಪೇಕ್ಷೆ ನಷ್ಟವಾಗುವುದಲ್ಲದೆ ಆಕ್ರಮಣಕಾರಿ ಮನೋಭಾವವೂ ಕಡಿಮೆಯಾಗುತ್ತದೆ. ಗಡ್ಡಮೀಸೆ ಬೆಳೆಯುವುದು ನಿಂತು, ಶಾರೀರಿಕ ಬಲ ಕಡಿಮೆಯಾಗಿ, ಬೊಜ್ಜು ಬೆಳೆದು ಮಧ್ಯವಯಸ್ಸು ದಾಟಿದ ಗಂಡಸಿನ ಕಳೆ ಬರುತ್ತದೆ. ಇವರನ್ನು ನೋಡಿ ಇತರರು ಪಾಠ ಕಲಿಯಬಹುದು! ಇನ್ನು, ಲೈಂಗಿಕ ಅಪರಾಧವನ್ನು ತಡೆಗಟ್ಟುವುದರಲ್ಲಿ ಹೆಣ್ಣಿನ ಪಾತ್ರ ಮಹತ್ವದ್ದು. ತಾಯಂದಿರು ಗಂಡುಮಕ್ಕಳಿಗೆ ಸ್ತ್ರೀಯರ ಬಗೆಗೆ ಗೌರವಭಾವ ಹೊಂದುವುದನ್ನು, ಹಾಗೂ ಹೆಣ್ಣಿನ ಕೋಮಲತೆಯನ್ನು ಅರ್ಥಮಾಡಿಕೊಳ್ಳುವುದನ್ನು ಕಲಿಸಿಕೊಟ್ಟರೆ ಇಡೀ ಸಮಾಜವೇ ಬದಲಾದೀತು! ಮಹಿಳೆಯರಿಗೆ: ನಿಮ್ಮನ್ನು ಬಯಸುವವರಿಗಾಗಿ ನೀವು ಅಂಗಪ್ರದರ್ಶನ ಮಾಡುವುದರಲ್ಲೇನೂ ತಪ್ಪಿಲ್ಲ, ಆದರೆ ಅದು ನೀವು ಬಯಸದಿರುವವರ ಕಣ್ಣಿಗೂ ಬೀಳುತ್ತದೆ ಎನ್ನುವುದನ್ನು ನೆನಪಿಡಿ!

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿ; (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು. ಅಥವಾ www.medisex.org ಪರಿಶೀಲಿಸಬಹುದು.

**ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ**